SL. No. : TTTT

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

**CCE RF**
**CCE RR**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 97-K**
**Code No. : 97-K**

# ವಿಷಯ : ರಾಜ್ಯಶಾಸ್ತ್ರ
# Subject : POLITICAL SCIENCE

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಶಾಲಾ ಅಭ್ಯರ್ಥಿ & ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Fresh & Regular Repeater)**

ದಿನಾಂಕ : 02. 04. 2018 ]
[ Date : 02. 04. 2018

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-30 ರವರೆಗೆ ]
[ Time : 9-30 A.M. to 12-30 P.M.

ಗರಿಷ್ಠ ಅಂಕಗಳು : 80 ]
[ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 47 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ. ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

ಇಲ್ಲಿ ಕತ್ತರಿಸಿ

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. ಭಾರತದ ಸಂವಿಧಾನ ರಚನಾ ಸಭೆಯ ಅಧ್ಯಕ್ಷರು

   (A) ಡಾ|| ಬಾಬು ರಾಜೇಂದ್ರ ಪ್ರಸಾದ್

   (B) ಸರ್ದಾರ್ ವಲ್ಲಭಭಾಯಿ ಪಟೇಲ್

   (C) ಡಾ|| ಬಿ.ಆರ್. ಅಂಬೇಡ್ಕರ್

   (D) ಬಿ.ಎನ್. ರಾವ್

2. ನಮ್ಮ ಸಂವಿಧಾನದ 21(ಎ) ವಿಧಿ ಇದಕ್ಕೆ ಸಂಬಂಧಿಸಿರುವುದು

   (A) ಬಾಲಕಾರ್ಮಿಕತನದ ನಿರ್ಮೂಲನೆ

   (B) ಅಸ್ಪೃಶ್ಯತಾ ಆಚರಣೆಯ ನಿಷೇಧ

   (C) ನಿರಂಕುಶ ಶಿಕ್ಷೆಯ ವಿರುದ್ಧ ರಕ್ಷಣೆ

   (D) ಉಚಿತ ಮತ್ತು ಕಡ್ಡಾಯ ಶಿಕ್ಷಣ

3. "ರಾಜ್ಯನೀತಿ ನಿರ್ದೇಶಕ ತತ್ವಗಳು ಸಂವಿಧಾನದ ಅಂತರಾತ್ಮವಾಗಿವೆ" ಎಂದವರು

   (A) ಜವಾಹರಲಾಲ್ ನೆಹರೂ

   (B) ಗ್ರಾನ್‌ವಿಲ್ಲೆ ಆಸ್ಟಿನ್

   (C) ಮಹಾತ್ಮ ಗಾಂಧೀಜಿ

   (D) ಕೆ.ಸಿ. ಮರ್ಕಾಂದನ್

4. ಭಾರತದ ಅಟಾರ್ನಿಜನರಲ್‌ರನ್ನು ನೇಮಕ ಮಾಡುವವರು

   (A) ಪ್ರಧಾನ ಮಂತ್ರಿ

   (B) ಮುಖ್ಯ ನ್ಯಾಯಾಧೀಶರು

   (C) ರಾಷ್ಟ್ರಪತಿ

   (D) ಉಪ ರಾಷ್ಟ್ರಪತಿ

5. ಲೋಕಸಭೆಯ ಸದಸ್ಯರ ಅಧಿಕಾರಾವಧಿ

(A) 5 ವರ್ಷಗಳು

(B) 3 ವರ್ಷಗಳು

(C) 6 ವರ್ಷಗಳು

(D) 2 ವರ್ಷಗಳು

6. ಸರ್ವೋಚ್ಚ ನ್ಯಾಯಾಲಯದ ಕೇಂದ್ರ ಕಚೇರಿ ಇರುವ ಸ್ಥಳ

(A) ಬೆಂಗಳೂರು

(B) ಮುಂಬೈ

(C) ನವ ದೆಹಲಿ

(D) ಕೊಲ್ಕತಾ

7. ಈ ಕೆಳಗಿನ ಯಾವ ರಾಜ್ಯ ದ್ವಿ–ಸದನ ಶಾಸಕಾಂಗ ಹೊಂದಿದೆ ?

(A) ಕೇರಳ

(B) ಕರ್ನಾಟಕ

(C) ಸಿಕ್ಕಿಂ

(D) ಮಣಿಪುರ

8. ಭಾರತದ ಸ್ಥಳೀಯ ಸರ್ಕಾರ ವ್ಯವಸ್ಥೆಯ ಪಿತಾಮಹ

(A) ಲಾರ್ಡ್ ಮೇಯೋ

(B) ಮಹಾತ್ಮ ಗಾಂಧೀಜಿ

(C) ಲಾರ್ಡ್ ರಿಪ್ಪನ್

(D) ಜವಾಹರಲಾಲ್ ನೆಹರೂ

9. 18,000 ಜನರಿಗೆ ಒಬ್ಬ ಜಿಲ್ಲಾ ಪಂಚಾಯಿತಿ ಸದಸ್ಯರನ್ನು ಹೊಂದಿರುವ ಜಿಲ್ಲೆ

(A) ಬೆಳಗಾವಿ

(B) ಉತ್ತರ ಕನ್ನಡ

(C) ತುಮಕೂರು

(D) ಕೊಡಗು

10. ನಮ್ಮ ಸಂವಿಧಾನದ 315 ನೇ ವಿಧಿಯು ಅವಕಾಶ ಕಲ್ಪಿಸಿರುವುದು

(A) ಲೋಕಸೇವಾ ಆಯೋಗದ ಸ್ಥಾಪನೆ

(B) ಸರ್ವೋಚ್ಚ ನ್ಯಾಯಾಲಯದ ಸ್ಥಾಪನೆ

(C) ಉಚ್ಚ ನ್ಯಾಯಾಲಯದ ಸ್ಥಾಪನೆ

(D) ಸ್ಥಳೀಯ ಸರ್ಕಾರಗಳ ರಚನೆ

II. **ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** $14 \times 1 = 14$

11. 1858 ರ ವಿಕ್ಟೋರಿಯಾ ರಾಣಿಯ ಘೋಷಣೆಯನ್ನು 'ಭಾರತದ ಮ್ಯಾಗ್ನ ಕಾರ್ಟ' ಎಂದು ಬಣ್ಣಿಸಲಾಗಿದೆ. ಏಕೆ ?

12. 'ಸಂವಿಧಾನ ಶಿಲ್ಪಿ' ಎಂದು ಡಾ॥ ಬಿ.ಆರ್. ಅಂಬೇಡ್ಕರ್‌ರವರನ್ನು ಯಾರು ವರ್ಣಿಸಿದ್ದಾರೆ ?

13. ಸಾಮಾಜಿಕ ನ್ಯಾಯ ಎಂದರೇನು ?

14. ಅಬ್ರಹಂ ಲಿಂಕನ್‌ರವರ ಪ್ರಕಾರ ಪ್ರಜಾಪ್ರಭುತ್ವ ಎಂದರೇನು ?

15. 1895 ರ ಸ್ವರಾಜ್ಯ ಮಸೂದೆಯಲ್ಲಿ ಪ್ರಥಮ ಬಾರಿಗೆ ಮೂಲಭೂತ ಹಕ್ಕುಗಳನ್ನು ಪ್ರಸ್ತಾಪಿಸಿದವರು ಯಾರು ?

16. ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ಯಾವ ದೇಶದ ಸಂವಿಧಾನದಿಂದ ಎರವಲು ಪಡೆಯಲಾಗಿದೆ ?

17. ರಾಷ್ಟ್ರಪತಿಯ ಹುದ್ದೆಯ ಬಗ್ಗೆ ಕೆ.ಎಂ. ಮುನ್ಷಿಯವರ ಅಭಿಪ್ರಾಯವೇನು ?

18. ಹಣಕಾಸಿನ ಮಸೂದೆಯನ್ನು ರಾಜ್ಯಸಭೆಯು ಎಷ್ಟು ದಿನಗಳವರೆಗೆ ಮಾತ್ರ ತಡೆಹಿಡಿಯಬಹುದು ?

19. ಡಾ|| ಬಿ.ಆರ್. ಅಂಬೇಡ್ಕರ್‌ರವರು ನಮ್ಮ ಸಂವಿಧಾನದ 32ನೇ ವಿಧಿಯನ್ನು ಏನೆಂದು ಕರೆದಿದ್ದಾರೆ ?

20. ರಾಜ್ಯ ಕಾರ್ಯಾಂಗದ ಸಂವಿಧಾನಾತ್ಮಕ ಮುಖ್ಯಸ್ಥರು ಯಾರು ?

21. ಕೋರಂ ಎಂದರೇನು ?

22. ವಿಧಾನ ಪರಿಷತ್ತಿಗಿಂತ ವಿಧಾನಸಭೆ ಹೆಚ್ಚಿನ ಅಧಿಕಾರವನ್ನು ಹೊಂದಿರುವ ಶಕ್ತಿಶಾಲಿ ಸದನವಾಗಿದೆ. ಏಕೆ ?

23. ಗ್ರಾಹಕ ರಕ್ಷಣಾ ಕಾಯ್ದೆಯನ್ನು ಯಾವಾಗ ಜಾರಿಗೊಳಿಸಲಾಯಿತು ?

24. ಗ್ರಾಮ ಪಂಚಾಯಿತಿಯ ಬಗ್ಗೆ ಗಾಂಧಿಜೀಯವರ ಅಭಿಪ್ರಾಯವೇನು ?

III. **ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ :** $15 \times 2 = 30$

25. 1773 ರ ರೆಗ್ಯೂಲೇಟಿಂಗ್ ಆ್ಯಕ್ಟ್‌ನ ನಿಬಂಧನೆಗಳೇನು ?

26. ಏಕಾತ್ಮಕ ಸರ್ಕಾರ ಮತ್ತು ಸಂಯುಕ್ತ ಸರ್ಕಾರಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

27. ಭಾರತೀಯ ಸಂವಿಧಾನದ ತಿದ್ದುಪಡಿಯ ವಿಧಾನಗಳಾವುವು ?

28. ಭಾರತದ ರಾಷ್ಟ್ರಪತಿಯವರ ಚುನಾವಣಾ ವಿಧಾನವನ್ನು ವಿವರಿಸಿ.

29. ಕೇಂದ್ರ ಮಂತ್ರಿ ಮಂಡಲವು ಹೇಗೆ ರಚಿತವಾಗಿದೆ ?

30. ರಾಜ್ಯಸಭೆಯ ಸದಸ್ಯರನ್ನು ಹೇಗೆ ಆಯ್ಕೆ ಮಾಡಲಾಗುತ್ತದೆ ?

31. ಸರ್ವೋಚ್ಚ ನ್ಯಾಯಾಲಯವು ಮೂಲಭೂತ ಹಕ್ಕುಗಳ ರಕ್ಷಿಸಲು ಹೊರಡಿಸುವ ಆಜ್ಞೆಗಳಾವುವು ?

32. ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಎಂದರೇನು ? ಒಂದು ಉದಾಹರಣೆ ಕೊಡಿ.

33. ಮುಖ್ಯ ಮಂತ್ರಿ ರಾಜ್ಯದ ಸಮಸ್ತ ಅಧಿಕಾರದ ನೇತಾರ. ಏಕೆ ?

34. ವಿಧಾನ ಪರಿಷತ್ತು ರಾಜ್ಯ ಕಾರ್ಯಾಂಗವನ್ನು ಹೇಗೆ ನಿಯಂತ್ರಿಸುತ್ತದೆ ?

35. ರಾಜ್ಯಪಾಲರು ಯಾವ ಸಂದರ್ಭಗಳಲ್ಲಿ ವಿಧಾನಸಭೆಯನ್ನು ವಿಸರ್ಜಿಸಬಹುದು ?

36. ಲೋಕ ಅದಾಲತ್ (ಜನತಾ ನ್ಯಾಯಾಲಯ) ಗಳನ್ನು ಏಕೆ ಸ್ಥಾಪಿಸಲಾಗಿದೆ ?

37. ದಂಡು ಪ್ರದೇಶ (ಕಂಟೋನ್ಮೆಂಟ್ ಬೋರ್ಡ್) ಗಳನ್ನು ಹೇಗೆ ರಚಿಸಲಾಗಿದೆ ?

38. ರಾಜ್ಯ ಲೋಕಸೇವಾ ಆಯೋಗದ ಸದಸ್ಯರಾಗಲು ಬೇಕಾಗಿರುವ ಅರ್ಹತೆಗಳೇನು ?

39. ರಾಷ್ಟ್ರಪತಿಯವರು ಕೇಂದ್ರ ಲೋಕಸೇವಾ ಆಯೋಗದ ಸದಸ್ಯರನ್ನು ಯಾವ ಸಂದರ್ಭಗಳಲ್ಲಿ ವಜಾಗೊಳಿಸಬಹುದು ?

IV. **ಈ ಕೆಳಗಿನ ಪ್ರಶ್ನೆಗಳಿಗೆ ಆರು ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

40. ಸ್ವಾತಂತ್ರ್ಯದಂತೆಯೇ ಸಮಾನತೆಯು ಏಕೆ ಮುಖ್ಯವಾಗಿದೆ ? ವಿವರಿಸಿ.

***ಅಥವಾ***

1935 ರ ಭಾರತ ಸರ್ಕಾರದ ಕಾಯ್ದೆಯನ್ನು ಭಾರತೀಯ ಸಂವಿಧಾನದ ಬೆಳವಣಿಗೆಯಲ್ಲಿ ಒಂದು ಪ್ರಮುಖ ಮೈಲುಗಲ್ಲು ಎಂದು ಏಕೆ ಪರಿಗಣಿಸಲಾಗಿದೆ ? ವಿವರಿಸಿ.

41. ನಮ್ಮ ಸಂವಿಧಾನದ 19ನೇ ವಿಧಿಯು ಜನಸ್ತೋಮದ ಜೀವಾಳವಾಗಿದೆ. ಏಕೆ ?

***ಅಥವಾ***

ರಾಜ್ಯನೀತಿ ನಿರ್ದೇಶಕ ತತ್ವಗಳು ಮೂಲಭೂತ ಹಕ್ಕುಗಳಿಗಿಂತ ಹೇಗೆ ವಿಭಿನ್ನವಾಗಿವೆ ?

42. ಪ್ರಧಾನ ಮಂತ್ರಿಗಳ ಯಾವುದಾದರೂ ಆರು ಅಧಿಕಾರ ಮತ್ತು ಕಾರ್ಯಗಳನ್ನು ಪಟ್ಟಿಮಾಡಿ.

***ಅಥವಾ***

ಲೋಕಸಭಾ ಸಭಾಪತಿಯವರ ಅಧಿಕಾರ ಮತ್ತು ಕಾರ್ಯಗಳನ್ನು ಪಟ್ಟಿಮಾಡಿ.

43. ಸರ್ವೋಚ್ಚ ನ್ಯಾಯಾಲಯದ ಮೂಲ ಅಧಿಕಾರ ವ್ಯಾಪ್ತಿಯಲ್ಲಿ ಒಳಗೊಳ್ಳುವ ಅಂಶಗಳಾವುವು ?

***ಅಥವಾ***

ರಾಜ್ಯಪಾಲರಾಗಲು ಬೇಕಾಗಿರುವ ಅರ್ಹತೆಗಳಾವುವು ?

44. ವಿಧಾನ ಪರಿಷತ್ತಿನ ಶಾಸನೀಯ ಅಧಿಕಾರಗಳನ್ನು ತಿಳಿಸಿ.

***ಅಥವಾ***

ಕಂದಾಯ ನ್ಯಾಯಾಲಯಗಳ ಶ್ರೇಣಿಯನ್ನು ಬರೆಯಿರಿ.

45. ಗ್ರಾಮ ಪಂಚಾಯಿತಿಯ ಸ್ಥಾಯಿ ಸಮಿತಿಗಳನ್ನು ವಿವರಿಸಿ.

***ಅಥವಾ***

ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯಗಳನ್ನು ವಿವರಿಸಿ.

V. **ಈ ಕೆಳಗಿನ ಪ್ರಶ್ನೆಗಳಿಗೆ *ಎಂಟು* ವಾಕ್ಯಗಳಲ್ಲಿ ಉತ್ತರಿಸಿ :** $2 \times 4 = 8$

46. ಭಾರತೀಯ ನಾಗರಿಕರು ಪಾಲಿಸಬೇಕಾಗಿರುವ ಮೂಲಭೂತ ಕರ್ತವ್ಯಗಳಾವುವು ?

47. ಭಾರತದ ರಾಷ್ಟ್ರಪತಿಯವರು ನ್ಯಾಯಾಂಗ ವ್ಯವಸ್ಥೆಯಲ್ಲಿ ಹೇಗೆ ಹಸ್ತಕ್ಷೇಪ ಮಾಡುತ್ತಾರೆಂದು ವಿವರಿಸಿ.